ಅಸಲು ದಾವಾ ಸಂಖ್ಯೆ 58/2016

ಡಿ ಡಬ್ಲ್ಯೂ: 1

**ದಿನಾಂಕ : 05.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ – ಪ್ರತಿವಾದಿಗಳ ಪರ ಶ್ರೀ ಎಂ ಎಸ್ ಕೆ ವಕೀಲರಿಂದಃ**

ನಾನು ಈ ದಾವೆಯ 1ನೇ ಪ್ರತಿವಾದಿಯಾಗಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿರುತ್ತದೆ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ನನ್ನ ದಾವೆಯ ಜೊತೆಗೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಶಾನೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಮನೆ ಕಟ್ಟಡದ ಅನುಮತಿ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-1 ಎಂದು, ನಾಲ್ಕು ಕಂದಾಯ ಪಾವತಿ ರಶೀದಿಗಳನ್ನು ಕ್ರಮವಾಗಿ ನಿಡಿ-2 ರಿಂದ ನಿಡಿ-5 ಎಂದು ಗುರುತಿಸಲಾಯಿತು. ಎರಡು ಫೋಟೋ ಹಾಗೂ ಸಿ ಡಿ ಅನ್ನು ನಿಡಿ-6 ರಿಂದ ನಿಡಿ-8 ಎಂದು ಗುರುತಿಸಲಾಯಿತು. (ಸದರಿ ಫೋಟೋ ಮತ್ತು ಸಿ ಡಿ ಗೆ ಸಂಬಂಧಿಸಿದಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ದೃಡೀಕರಣ ಪತ್ರವನ್ನು ಹಾಜರು ಪಡಿಸುವ ತಕಾರಾಗಿ ಒಳಪಟ್ಟು ನಿಶಾನಿಸಲಾಗಿದೆ). 2010 ಮತ್ತು 11ನೇ ಸಾಲಿನ ಡಿಮಾಂಡ್ ರಿಜಿಸ್ಟರ್ ನ ದೃಡೀಕೃತ ನಕಲನ್ನು ನಿಡಿ-9 ಎಂದು ಗುರುತಿಸಲಾಯಿತು. 2016-17 ಮತ್ತು 2018-19 ನೇ ಸಾಲಿನ ಡಿಮಾಂಡ್ ರಿಜಿಸ್ಟರ್ ನ ದೃಡೀಕೃತ ನಕಲನ್ನು ನಿಡಿ-10 ಮತ್ತು ನಿಡಿ-11 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

( ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ